ಆವಾಹಿಸಿಕೊಂಡು ಹೊರಳಾಡಿ ಒಂದಿರುಳನ್ನು ಮುಂದೂಡುವಷ್ಟು ನೋವು...

'ಈಶ್ವರೀ...' ಕಿವಿಯ ಪಕ್ಕ ಬಿಸಿ ಉಸಿರು ಬಿಡುತ್ತ ಕರೆದ ಹೆಸರು ಅವನ ಧ್ವನಿಯಲ್ಲಿ ಅವಳಿಗೆ ಹೊಚ್ಚ ಹೊಸದಾಗಿ ಕೇಳಿಸಿತ್ತು. ಅವಳ ದೇಹವೆಲ್ಲ ಯಾವುದೋ ಪರವಶತೆಯ ಬೆಂಕಿ ತಾಗಿದಂತೆ ಬಿಸಿಯಾಗಿಹೋಗಿತ್ತು. ಈ ಜಗತ್ತಿನ ಅರಿವೇ ಇಲ್ಲದಂತೆ ಅವಳ ಮೈ ಮನಸ್ಸುಗಳು ಕಳೆದುಹೋಗಿದ್ದವು.

ಅವಳ ಎದೆಯ ಮೇಲೆ ಮೃದುವಾಗಿ ಆಡಿ ಯಾವುದೋ ವೇಗ ಪಡೆದಂತೆ ಅವನ ಕೈ ಅವಳ ಕೆನ್ನೆಯನ್ನು ಸವರಿ ತುಟಿಗಳ ಮೇಲೆ ಬಂದಿತ್ತು. ಅಷ್ಟೇ... ರಸಭಂಗವಾದಂತೆ ಅವನು ತಣ್ಣಗಾಗಿಬಿಟ್ಟಿದ್ದ. ಅವಳ ಶರೀರವನ್ನು ಬಲವಾಗಿ ತಬ್ಬಿ ಹಿಡಿದಿದ್ದ ಅವನ ಕೈಗಳು ಸಡಿಲವಾಗಿದ್ದವು. ತಟ್ಟನೆ ಅವನು ಅವಳನ್ನು ಪಕ್ಕಕ್ಕೆ ಸರಿಸಿ ಎಚ್ಚೆತ್ತವನಂತೆ ಹೊರನಡೆದುಬಿಟ್ಟಿದ್ದ. ಯಾವುದೋ ಮತ್ತಿನಲ್ಲಿ ಚಲಿಸುತ್ತಿದ್ದ ಅವನ ಬೆರಳುಗಳು ಸೀಳು ತುಟಿಯ ನಡುವಿಂದ ತಗುಲಿದ ಅವಳ ಹಲ್ಲು ಮತ್ತು ಎಂಜಲಿಗೆ ಹೆದರಿದಂತಿದ್ದವು. ಬೆಚ್ಚಿದ ಅವನ ಕೈ ಹಿಂದೆ ಸರಿದಿತ್ತು...

'ಈಶ್ವರೀ...' ಎಂದು ಅವಳಮ್ಮ ಕರೆದದ್ದನ್ನು ಕೇಳಿ, 'ಆಯ್ತಮ್ಮಾ...' ಎಂದ ಈಶ್ವರಿ ಟಿ.ವಿ. ಬಂದ್ ಮಾಡಿದಳು. ಲೈಟಾಫ್ ಮಾಡಿ ಮಲಗಲು ಎದ್ದು ಹೋದಳು.

ಅವರಿದ್ದ ಪುಟ್ಟ ಮನೆಯಲ್ಲಿ ಅವಳಮ್ಮನ ಕೋಣೆ ಹಾಲ್‌ನ ಪಕ್ಕದಲ್ಲೇ ಇತ್ತು. ರಾತ್ರಿಯ ಊಟ ಮುಗಿದ ನಂತರ ಮತ್ತು ವಾರಾಂತ್ಯಗಳಲ್ಲಿ ನೆಟ್‌ಫ್ಲಿಕ್ಸಿನ ಮುಂದೆ ಪರವಶಳಾಗಿ ಕೂರುತ್ತಿದ್ದ ಈಶ್ವರಿಗೆ ಮಲಗುವ ಸಮಯವಾಯ್ತೆಂದು ಶಾರದಮ್ಮ ಕೂಗಿ ಹೇಳದಿದ್ದರೆ ಕಾಲದ ಪರಿವೆಯೇ ಇರುತ್ತಿರಲಿಲ್ಲ.

2

ಈಶ್ವರಿ ಹುಟ್ಟಿದ್ದು ಅವಳ ತಪ್ಪಲ್ಲ. ಅವಳು ಹಾಗೆ ಹುಟ್ಟಿದ್ದು ಅವಳ ಪೋಷಕರ ತಪ್ಪೂ ಆಗಿರಲಿಲ್ಲ. ಆದರೆ ಸಮಾಜ ಇಬ್ಬರ ಕರ್ಮವನ್ನೂ ಕೂಡಿಸಿ ಆಡಿಕೊಂಡು ನಕ್ಕಿತ್ತು. ಕನಿಕರಿಸಿ ಲೊಚಗುಟ್ಟಿ ಅವರು ಸಂಕಟದಿಂದ ಕಣ್ಣೀರು ಹರಿಸಿ ಕರಗಿಹೋಗುವಂತೆ ಮಾಡಿತ್ತು.

ಚೊಚ್ಚಿಲ ಬಸಿರು, ಹೆರಿಗೆ, ಬಾಣಂತಿಯಾದ ಎಳೆಯ ವಯಸ್ಸಿನ ಶಾರದಮ್ಮ ಮಗುವಿನ ಮುಖವನ್ನು ನೋಡಲು ಕೂಡ ಹೆದರಿಕೊಂಡಿದ್ದರು. ಆ ದಿನಗಳು ಈಗ ಅವರಲ್ಲಿ ಅಪರಾಧಿ ಪ್ರಜ್ಞೆಯನ್ನು ಹುಟ್ಟಿಸುತ್ತವೆ. ಅದಕ್ಕಾಗಿ ದೇವರಲ್ಲಿ ಅವರು ನಾನಾ ರೀತಿಯಲ್ಲಿ ಕ್ಷಮೆ ಕೇಳಿದ್ದುಂಟು.

ಹುಟ್ಟಿದ ಮಗು ಸತ್ತು ಹೋಗುತ್ತದೆಂದು ಅಥವಾ ಸತ್ತೇ ಹೋಗಲಿ ಎಂದು ಶಾರದಮ್ಮ ಕಾದಿದ್ದ ದಿನಗಳೂ ಇದ್ದವು. ಆದರೆ ಹಾಗೇನು ಆಗಿರಲಿಲ್ಲ. 'ಇನ್ನೂ ಬದುಕಿದೆಯಾ? ಎಲ್ಲ ನಿನ್ನದೇ ತಪ್ಪು' ಎನ್ನುವಂತೆ ಗಂಡನೂ ಎಳೆಯ ಜೀವವನ್ನು ಕೆಕ್ಕರಿಸಿ ನೋಡಿದಾಗ ಮಾತ್ರ ಶಾರದಮ್ಮನಿಗೆ ಉರಿದು ಹೋಗಿತ್ತು. ಅವರ ಮನಸ್ಸಿನ ಸಂಕಟಗಳು, ರೋದನಗಳು ಮುಗಿಲು ಮುಟ್ಟಿ, ಕಂಬನಿಗಳ ಮೋಡ ಕಟ್ಟಿ, ನಿಲ್ಲದ ಕಣ್ಣೀರ ಹನಿಯಾಗಿ ಧರೆಗೆ ಸುರಿದಿತ್ತು. ಹಾಗೆ ಸುರಿದಂತೆಲ್ಲ ಶಾರದಮ್ಮ ಖಾಲಿಯಾಗುತ್ತ ಬಂದಿದ್ದರು. ಯಾವುದೋ ಕೆಚ್ಚು ಆ ಖಾಲಿಯನ್ನೆಲ್ಲ ಕೊಚ್ಚಿಹೋಗುವಂತೆ ಆವರಿಸುತ್ತ ಬಂದಿತ್ತು. ಆ ಪುಟ್ಟ ಅಸಹಾಯಕ ಮಗುವಿನ ರಕ್ಷಣೆ ಅವರೊಬ್ಬರದು ಮಾತ್ರವೇ ಎಂಬಂತೆ ಶಾರದಮ್ಮ ಬಂಡೆಯಾಗುತ್ತ ಬಂದಿದ್ದರು. ಎಳೆಯ ಕಂದಮ್ಮನ ತಾಯ್ತನದ ಜವಾಬ್ದಾರಿಯನ್ನು ಹೊತ್ತ ಶಾರದಮ್ಮ ಗಂಡನನ್ನು ಹತ್ತಿರ ಸೇರಿಸುವುದನ್ನು ನಿಲ್ಲಿಸಿಬಿಟ್ಟರು. ಗಂಡ ಅದಕ್ಕೂ ಮಗುವನ್ನು ಮೂದಲಿಸುವುದಕ್ಕೆ ಶುರು ಮಾಡಿದ. ಮಗುವಿನ ಚಿಕಿತ್ಸೆಗೆ ಪ್ರಯತ್ನವನ್ನಾಗಲೀ, ಹಣ ಕೊಡುವುದಾಗಲಿ ಎರಡರಿಂದಲೂ ಪಲಾಯನಗೈದ. ಹೆಂಡತಿಗೊಬ್ಬ ಮಿಂಡನಿದ್ದಾನೆಂದು ತನಗೆ ತಿಳಿದವರಿಗೆಲ್ಲ ಹೇಳುತ್ತ ಬಂದ. ಮಗಳ ಕುರೂಪಕ್ಕಿಂತ ತಮ್ಮ ಗಂಡನ ವಿಕಾರತೆ ಶಾರದಮ್ಮನನ್ನು ನೋಯಿಸಿತ್ತು. ಅವನೆಲ್ಲಿಗೆ ಹೋಗಿ, ಏನು ಮಾಡಿ ಬರುತ್ತಾನೆಂದು ಅಲ್ಲಿಂದ ಮುಂದಕ್ಕೆ ಅವರು ಕೇಳಲೂ ಇಲ್ಲ.

